<u>ಅಸಲು ದಾವಾ</u>:- 238/2015 ಪಿ.ಡಬ್ಲ್ಯೂ:- 2

ದಿನಾಂಕಃ 04.12.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ. ವೈ ಜೆ ಆರ್ ವಕೀಲರಿಂದ</u>

ಎಷ್ಟು ಆಸ್ತಿಗಳು ನಮ್ಮ ಒಟ್ಟು ಕುಟುಂಬಕ್ಕೆ ಇದ್ದಾವೆ ಎಂದರೆ 1 ಎಕರೆ 20 ಗುಂಟೆ ಜಮೀನು ಹಾಗೂ ಒಂದು ಮನೆ ಎಂದು ನುಡಿಯುತ್ತಾರೆ. ಮನೆ ಯಾವ ಗ್ರಾಮದಲ್ಲಿ ಬರುತ್ತದೆ ಎಂದರೆ ಯರಗನಾಳು ಗ್ರಾಮದಲ್ಲಿ ಎಂದು ನುಡಿಯುತ್ತಾರೆ. ಮನೆಗೆ ಸಂಬಂಧಿಸಿದ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಮನೆ ಪತ್ರ ಮತ್ತು ಕಂದಾಯ ರಶೀದಿ ಎಂದು ನುಡಿಯುತ್ತಾರೆ. ಸದರಿ ಮನೆಯ ಸಂಖ್ಯೆ ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ.1 ಬಿ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ಎ ಮತ್ತು ಬಿ ಆಸ್ತಿಗಳ ವಿಸ್ತೀರ್ಣವನ್ನು ಅಡಿ ಅಥವಾ ಮೀ ಟರ್ ಯಾವುದು ಎಂದು ನಮೂದಿಸಿಲ್ಲ ಎಂದರೆ ಗೊತ್ತಿಲ್ಲ.

ದಾವಾ ಜಮೀನಿನ ಸರ್ವೆ ನಂಬರ್ ಎಷ್ಟು ಎಂದರೆ ನೆನಪಿಲ್ಲ. ನಾನು ಎಲ್ಲಿಯವರೆಗೆ ಓದಿದ್ದೇನೆ ಎಂದರೆ 9 ನೇ ತರಗತಿ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ನಿಪಿ 5 ಪಹಣಿಯಲ್ಲಿ ಯಾವ ವರ್ಷದ ಸಾಲಿಗೆ ಸಂಬಂಧಿಸಿದ್ದು ಹಾಗೂ ಕಲಂ ನಂ.12 ರಲ್ಲಿ ಯಾವ ಹೆಸರೂ ಸಹ ನಮೂದು ಇಲ್ಲ ಎಂದರೆ ಸರಿ. ನಿಪಿ 6 ಮತ್ತು 7 ಪಹಣಿಗಳು 1 ನೇ ಪ್ರತಿವಾದಿಯ ಹೆಸರಿಗೆ ಇರುತ್ತವೆ ಎಂದರೆ ಸರಿ. 1 ನೇ ಪ್ರತಿವಾದಿ, ನನ್ನ ಗಂಡ ಹಾಗೂ ನನ್ನ ಮೈದುನ ರವರು ಮಾಡಿಕೊಂಡ ವಿಭಾಗ ಪತ್ರದ ಆಧಾರದ ಮೇಲೆ ನಿಪಿ 6 ಮತ್ತು 7 ಪಹಣಿಗಳು 1 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ.

ನಿಪಿ 2 ವಿಭಾಗ ಪತ್ರದ ಆಧಾರದ ಮೇಲೆ 1 ನೇ ಪ್ರತಿವಾದಿಯ ಹೆಸರಿಗೆ ಸ್ವತ್ತುಗಳ ಖಾತೆ ಬದಲಾವಣೆ ಸಮಯದಲ್ಲಿ ನಾವು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ಖಾತೆ

ಬದಲಾವಣೆ ಆಗಿ 3 ತಿಂಗಳು ಆಗಿ ಹೋಗಿತ್ತು ಹಾಗಾಗಿ ತಕರಾರು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯಿಂದ 1,10,000/- ರೂ.ಗಳನ್ನು ನನ್ನ ಗಂಡ ಪಡೆದುಕೊಂಡು ಅವರಿಗೆ ಜಮೀನುಗಳ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಯಾವುದೇ ಹಣ ಕೊಟ್ಟಿಲ್ಲ ಅದರೆ ಪತ್ರದಲ್ಲಿ ನಮೂದು ಇರುತ್ತದೆ ಅಷ್ಟೇ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ನನಗೆ 1,10,000/- ರೂ.ಗಳನ್ನು ನನಗೆ ಹಕ್ಕು ಖುಲಾಸೆ ಪತ್ರದಂತೆ ನೀಡಿಲ್ಲ ಎಂದು ನನ್ನ ಗಂಡ ಜೀವಂತವಿದ್ದ ಸಮಯದಲ್ಲಿ ಹಾಗೂ ಅವರು ತೀರಿಕೊಂಡ ನಂತರ ನಾವು ಪೋಲೀಸ್ ಠಾಣೆಯಲ್ಲಿ ದೂರು ನೀಡಿರುವುದಿಲ್ಲ ಎಂದರೆ ಸರಿ.

ದಾವಾ ಐಟಂ ನಂ.1 ರ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವಂತೆ ನಿಪಿ 3 ರಂತೆ ನಾವು ಆರ್ ಟಿ ಐ ಅರ್ಜಿಯನ್ನು ಪಂಚಾಯತಿಯಲ್ಲಿ ಸಲ್ಲಿಸಿರುತ್ತೇವೆ ಎಂದರೆ ನೆನಪಿಲ್ಲ. ಸದರಿ ಅರ್ಜಿಯ ಮಾಹಿತಿಯ ಅನುಸಾರವಾಗಿ ಪಂಚಾಯತಿಯವರು ನಮಗೆ ದಾಖಲೆಗಳನ್ನು ನೀಡಿದ್ದಾರಾ ಎಂದರೆ ನೆನಪಿಲ್ಲ. ನಮ್ಮ ಕುಟುಂಬದಲ್ಲಿ ವಿಭಾಗ ಆಗಿ ಹಾಗೂ ಅದರಂತೆ ಖಾತೆ ಬದಲಾವಣೆ ಆಗಿದ್ದರೂ ಸಹ ವೈಮನಸ್ಸಿನಿಂದ ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ